ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ತಾಂ.ಶಿ.ನಿ./ಎನ್.ಬಿ.ಎ-ಇಂ/2015-16

**ನಿರ್ದೇಶಕರ ಕಛೇರಿ,**
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಅರಮನೆ ರಸ್ತೆ, ಬೆಂಗಳೂರು
ದಿ:7.11.2017

**ಸುತ್ತೋಲೆ**

ವಿಷಯ: ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಮಾನ್ಯತಾ ಸಂಬಂಧಿ ಕೊನೆಯ ಹಂತದ ತರಬೇತಿ ಕಾರ್ಯಗಾರ ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಕಾರ್ಯಕ್ರಮಗಳನ್ನು (Programs) ರಾಷ್ಟ್ರೀಯ ಮಾನ್ಯತಾ ಮಂಡಳಿಯವರಿಂದ ಮಾನ್ಯತಾ ಮೌಲ್ಯಮಾಪನ ನಡೆಸಲು ತಯಾರಿ ಮಾಡಿಕೊಳ್ಳಲಾಗುತ್ತಿರುವುದು ಸರಿಯಷ್ಟೆ.

ಅದರಂತೆ, ಇಲಾಖೆಯು ಆರ್.ವಿ ಕಾಲೇಜ್ ಆಫ್ ಇಂಜಿನೀಯರಿಂಗ್, ಬೆಂಗಳೂರು ಇವರ ಸಹಯೋಗದೊಂದಿಗೆ ಎರಡು ದಿನಗಳಂತೆ ಮೂರು ಹಂತಗಳಲ್ಲಿ ನಡೆಯುತ್ತಿರುವ ಒಟ್ಟು ಆರು ದಿನಗಳ ತರಬೇತಿ ಕಾರ್ಯಗಾರದ ಕೊನೆಯ ಹಂತದ ತರಬೇತಿ ಕಾರ್ಯಾಗಾರವನ್ನು **ದಿನಾಂಕ:22.11.2017 ರಿಂದ 23.11.2017** ರವರೆಗೆ ಆರ್.ವಿ ಕಾಲೇಜ್ ಆಫ್ ಇಂಜಿನೀಯರಿಂಗ್, ಮೈಸೂರು ರಸ್ತೆ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಾಗಾರಕ್ಕೆ ಪ್ರಾಚಾರ್ಯರು, ಎಲ್ಲಾ ವಿಭಾಗದ ಮುಖ್ಯಸ್ಥರು ಮತ್ತು ಕಾಲೇಜಿನ ಮಾನ್ಯತಾ ಸಂಯೋಜಕರು, ಕಾಲೇಜಿನ ಮತ್ತು ವಿಭಾಗಗಳ ಸ್ವಯಂ ಮೌಲ್ಯಮಾಪನ ವರದಿಗಳನ್ನು ಸಿದ್ಧಪಡಿಸಿಕೊಂಡು ಕಾರ್ಯಗಾರದಲ್ಲಿ ಪ್ರಸ್ತುತಪಡಿಸಲು ಸೂಚಿಸಲಾಗಿದೆ.

ಇದು ರಾಜ್ಯಮಟ್ಟದ ಕಾರ್ಯಗಾರ, ಆದ್ದರಿಂದ ಪೂರ್ವಸಿದ್ಧತೆಯೊಂದಿಗೆ ಕಾರ್ಯಗಾರದಲ್ಲಿ ಪಾಲ್ಗೊಂಡು ತಮ್ಮ ಸಂಸ್ಥೆಗಳ ಮತ್ತು ಕಾರ್ಯಕ್ರಮಗಳ ಸ್ವಯಂ ಮೌಲ್ಯಮಾಪನ ವರದಿಗಳನ್ನು ಜಾಗ್ರತೆಯಿಂದ ತಪ್ಪದೇ ಪ್ರಸ್ತುತ ಪಡಿಸಲು ಇನ್ನೊಮ್ಮೆ ಸೂಚಿಸಲಾಗಿದೆ.

ನಿರ್ದೇಶಕರು
7-11-17

ಗೆ,

**ಪ್ರಾಚಾರ್ಯರುಗಳು,** ಎಲ್ಲಾ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1) **ಎಲ್ಲಾ ಜಂಟಿ ನಿರ್ದೇಶಕರುಗಳ** ಮಾಹಿತಿಗಾಗಿ
2) ಈ ಆಡಳಿತ ಸಂಯೋಜಕರು ತಾಶಿನಿ ಬೆಂಗಳೂರು ಇವರ ಸೂಕ್ತ ಕ್ರಮಕ್ಕಾಗಿ.
3) ನಿರ್ದೇಶಕರ ಆಪ್ತ ಸಹಾಯಕರ ಮಾಹಿತಿಗಾಗಿ.